ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಕರ್ನಾಟಕ ವಿಧಾನ ಸಭೆ ಸಚಿವಾಲಯ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ ದಿನಾಂಕ : DATE : 3/7/20

# ಮೂರ್ತಿ ಮರು ನೇಮಕಕ್ಕೆ ಕೋರ್ಟ್ ಸೂಚನೆ

**ಬೆಂಗಳೂರು:** ವಿಧಾನಸಭೆ ಕಾರ್ಯದರ್ಶಿಯಾಗಿದ್ದ ಎಸ್.ಮೂರ್ತಿ ಮೇಲಿನ ಆರೋಪಕ್ಕೆ ಸಂಬಂಧಿಸಿದಂತೆ ತನಿಖೆ ಬಾಕಿ ಇರಿಸಿ, 3 ವಾರದೊಳಗೆ ಕೆಲಸಕ್ಕೆ ಮರು ನೇಮಕ ಮಾಡಿಕೊಳ್ಳಬೇಕೆಂದು ಹೈಕೋರ್ಟ್ ಸರ್ಕಾರಕ್ಕೆ ಸೂಚಿಸಿದೆ. ವಿಧಾನಸಭೆ ಕಾರ್ಯದರ್ಶಿ ಹುದ್ದೆಯಿಂದ ಮೂರ್ತಿ ಅವರನ್ನು ಅಮಾನತುಗೊಳಿಸಿ ವಿಧಾನಸಭೆ ವಿಶೇಷ ಮಂಡಳಿ ಹೊರಡಿಸಿರುವ ಆದೇಶ ನಿಯಮಾನುಸಾರವಿಲ್ಲ ಎಂದು ಅಭಿಪ್ರಾಯ ವ್ಯಕ್ತಪಡಿಸಿರುವ ನ್ಯಾಯಮೂರ್ತಿ ಪಿ.ಬಿ. ಭಜಂತ್ರಿ ಅವರಿದ್ದ ಪೀಠ, ಶಿಸ್ತುಕ್ರಮ ವಿಚಾರಣೆ ಫಲಿತಾಂಶ ಆಧರಿಸಿ



ಮರು ನೇಮಕ ಮಾಡಬೇಕೆಂದು ಗುರುವಾರ ಆದೇಶಿಸಿದೆ. 2016-17ರ ಬೆಳಗಾವಿ ವಿಧಾನ ಮಂಡಲ ಅಧಿವೇಶನ ಸಂದರ್ಭದಲ್ಲಿ ಕೆ.ಬಿ.ಕೋಳಿವಾಡ ಸ್ಪೀಕರ್ ಆಗಿದ್ದರು. ಈ ವೇಳೆ ಅಧಿವೇಶನಕ್ಕೆ ಮಾಡಲಾದ ವೆಚ್ಚದ ಬಗ್ಗೆ ನಂತರ ಸ್ಪೀಕರ್ ಆದ ರಮೇಶ್‌ಕುಮಾರ್ ಆಕ್ಷೇಪವೆತ್ತಿದ್ದರು. ವಿಧಾನಸಭೆ ಕಾರ್ಯದರ್ಶಿಯಾಗಿ ಸಲಹೆ ನೀಡದೆ ಹೆಚ್ಚು ವೆಚ್ಚವಾಗಲು ಕಾರಣರಾಗಿದ್ದಾರೆಂದು ಆರೋಪ ಹೊರಿಸಿ ಅಮಾನತು ಮಾಡಿದ್ದರು. ಈ ಆದೇಶದ ವಿರುದ್ಧ ಮೂರ್ತಿ ಕೋರ್ಟ್ ಮೆಟ್ಟಿಲೇರಿದ್ದರು. ನಿಯಮಗಳ ಪ್ರಕಾರ, ಸರ್ಕಾರಿ ನೌಕರರನ್ನು ಅಮಾನತುಪಡಿಸಿದ 6 ತಿಂಗಳೊಳಗೆ ಅವರ ವಿರುದ್ಧದ ಆರೋಪಗಳ ತನಿಖೆ ಪೂರ್ಣಗೊಳಿಸಬೇಕು. ಒಂದೊಮ್ಮೆ ನಿಗದಿತ ಅವಧಿಯಲ್ಲಿ ತನಿಖೆ ಪೂರ್ಣ ಮಾಡದಿದ್ದರೆ, ಅವರನ್ನು ಕೆಲಸಕ್ಕೆ ಮರುನೇಮಕ ಮಾಡಬೇಕು. ಈ ಪ್ರಕರಣದಲ್ಲಿ ಒಂದೂವರೆ ವರ್ಷ ಕಳೆದರೂ ತನಿಖೆ ಪೂರ್ಣಗೊಳಿಸಿಲ್ಲ ಎಂದು ಪೀಠ ಹೇಳಿದೆ. ಒಂದೂವರೆ ವರ್ಷದಿಂದ ಅರ್ಜಿದಾರರನ್ನು ಅಮಾನತ್ತಿನಲ್ಲಿರಿಸಿರುವ ಕಾರಣ ಅವರಿಗೆ ಸಿಗಬೇಕಿರುವ ಭತ್ಯೆಯನ್ನೂ ಪಾವತಿಸಬೇಕು ಎಂಗೂ ತಿಳಿಸಿದೆ.